ಕೊರೊನಾ ಬರ್ತದೆ ಅಂತ ಹೇಳಿದ್ರು. ನಮ್ಮ ಅವಸ್ಥೆ ಯಾರಿಗೆ ಸಾ ಬೇಡ. ನಾನು ಶುಗರ್ ಪೇಷೆಂಟ್. ಕಾಲ ಕಾಲಕ್ಕೆ ಮಾತ್ರೆ ಇಲ್ಲದೇ ಇದ್ರೆ ಆಗೂದಿಲ್ಲ. ಮಾತ್ರೆ ಪೂರ ಖಾಲಿ. ಅದನ್ನು ತರಿಸ್ಲಿಕ್ಕೆ ಕಂಡಾಬಟ್ಟೆ ಕಷ್ಟಪಟ್ಟೆ. ಸರಿ ಅಂತೂ ಇಂತೂ ಹೇಗಾದ್ರೂ ಯಾರಿಗೋ ಫೋನ್ ಮಾಡಿ ದಮ್ಮಯ್ಯ ದಕ್ಕಯ್ಯ ಹಾಕಿ ಬೇಳೆ ಕಾಳು ತರಕಾರಿ ಎಲ್ಲ ಭಾರೀ ಕಷ್ಟದಲ್ಲಿ ತರಿಸಿಕೊಂಡೆ. ಆಮೇಲೆ ಸುರುವಾದದ್ದೇ ಸಮಸ್ಯೆ'.

'ಯಾಕೆ? ಎಂಥದಾಯ್ತು? ಮತ್ತೆ ಪಾಲು ಪಟ್ಟಿ ಅಂತ ಸುರು ಮಾಡಿದನಾ ತಮ್ಮ?'

'ಬರೇ ಪಾಲು ಪಟ್ಟಿ ಆದ್ರೆ ತೊಂದ್ರೆ ಇರ್ಲಿಲ್ಲ.'

'ಮತ್ತೆ?'

'ಅವ ತಳ ಊರಿದವನೇ, ಅಣ್ಣಾ ಇನ್ನು ಹೆಚ್ಚೂ ಕಡಿಮೆ ನಾವು ವಾಪಾಸ್ ಬೊಂಬಾಯಿಗೆ ಹೋಗೂದಿಲ್ಲ' ಅಂದ. ನಾನು 'ಯಾಕೆ? ಎಂಥದಾಯ್ತು?' ಅಂತ ಕೇಳಿದೆ. 'ನನಿಗೆ ಇತ್ತಿಚೆಗಿನ ವರ್ಷದಲ್ಲಿ ಕಂಡಾಬಟ್ಟೆ ಲಾಸ್ ಆಗಿದೆ. ಅಲ್ಲಿದ್ದು ಮನೆ, ಕಾರು ಎಲ್ಲ ಮಾರಿ ಸಾಲ ತೀರಿಸಿದೆ. ಊರಿನ ಜನ ಎಲ್ಲ ವರ್ಷ ವರ್ಷ ಕೆಲಸ ಬಿಡ್ತಾ ಬಂದದ್ರಿಂದ ಕೆಲಸಕ್ಕೆ ಜನ ಸಿಗೂದು ಸಾ ಕಷ್ಟ ಆಯ್ತು. ಎಲ್ಲ ಬಿಹಾರ, ಅಸ್ಸಾಂ ಕಡೆಯ ಕೆಲಸಗಾರರು. ಅವರಿಗೆ ನಮ್ಮ ಹಾಗೆ ತಿಂಡಿ ಮಾಡ್ಲಿಕ್ಕೆ ಬರೂದಿಲ್ಲ. ಹಾಗಾಗಿ ಹೋಟ್ಲು ಸಾ ಬಂದು ಮಾಡಿ ಇದ್ದದ್ದನ್ನೆಲ್ಲ ಕಟ್ಟಿಕೊಂಡು ಬಂದಿದ್ದೇವೆ' ಅಂತ ಹೇಳಿದ. ನಾನು ನಂಗೆ ಅವ ಆಧಾರ ಆಗ್ತಾನೆ ಅಂತ ಎಣಿಸಿದ್ರೆ ಅವ ನನ್ನ ಆಧಾರವನ್ನೆ ಬಯಸ್ತಾ ಇದ್ದಾನೆ. ಕ್ವಾರಂಟೈನ್ ಅವಧಿ ಮುಗ್ದ ನಂತ್ರ ಅವನೇ ಮನೆಯ ಜವಾಬ್ದಾರಿ ಪೂರ ತೆಕ್ಕೊಂಡು ಬಿಟ್ಟ. ಅವನ ಹೆಂಡತಿ ಅಡುಗೆ ಮನೆದ್ದು ಮಾತ್ರ ಅಲ್ಲ, ಪೂರ ಜವಾಬ್ದಾರಿ ತೆಕ್ಕೊಂಡ್ಳು. ನೋಡ್ತಾ ಇದ್ದ ಹಾಗೇ ನಾನು ನನ್ನ ಮನೆಯಲ್ಲೇ ಪರಕೀಯ ಆದಂತೆ ಆಯಿತು.'

'ಯಾಕೆ? ಅಂಥ ಭಾವನೆ ಮೂಡಿದ್ದು?'

ದಯಾನಂದನಿಗೆ ಬಾಯಾರಿಕೆ ಆಗಿತ್ತು. 'ಒಂಚೂರು ನೀರು ಕೊಡ್ತಿರಾ?' ಅಂತ ಕೇಳಿದ. ಒಬ್ಬ ಸಾಧು ನೀರುಕೊಟ್ಟ. ಸುಧಾರಿಸಿಕೊಂಡ ನಂತರ ದಯಾನಂದ ಮುಂದುವರಿಸಿದ.

'ಸುರುಸುರುವಿಗೆ ನಂಗೆ ಎಂಥದು ಬೇಕಾ ಅಂತದನ್ನೇ ಬೇಯಿಸಿ ಹಾಕ್ತಿದ್ಲು. ಆಮೇಲಾಮೇಲೆ, ಭಾವಾ ನಿಮಿಗೆ ಮೂರು ದೋಸೆ ಸಾಕಾಗುದಿಲ್ವಾ? ಚಪಾತಿ ಎರಡೇ ಸಾಕು' ಅಂತೆಲ್ಲ ಟೈಟ್ ಮಾಡ್ಲಿಕ್ಕೆ ಸುರು ಮಾಡಿದ್ಳು. ತಮ್ಮ ಸಾ ಅದಕ್ಕೇ ಸಪೋರ್ಟ್. ಸಾಮಾನು ತರ್ಲಿಕ್ಕೆ ಅವನಿಗೆ ನಾನೇ ದುಡ್ಡು ಕೊಡ್ಬೇಕು. ಆದ್ರೆ ಸಾಮಾನು ತಂದು ಹಾಕಿದವ, 'ಅಣ್ಣಾ ನೀಬು ಖರ್ಚು ಕಡಿಮೆ ಮಾಡಿದ್ರೆ ನಾನು ಬಚಾವ್. ಇಲ್ಲಾಂತಾದ್ರೆ ಭಾರೀ ಬಂಜ್ಗ ಉಂಟು' ಅಂತ ಹೇಳ್ಲಿಕ್ಕೆ ಸುರು ಮಾಡಿದ. 'ನಾನು ಇರೂದು ಒಬ್ಬ. ತಿನ್ನುದು ನಿನ್ನ ಹೆಂಡತಿ ಯೆಂತ ಬೇಯಿಸಿ ಹಾಕ್ತಾಳಾ ಅದನ್ನು. ಅದೂ ಸಾ ಲೆಕ್ಕದ್ದು. ಹೀಗಿರುವಾಗ ನನ್ನದು ಯೆಂತ ಖರ್ಚು ಮಾರಾಯಾ?' ಅಂತ ಕೇಳಿದೆ. 'ನಿನ್ನದು ಶುಗರ್ ಬೀಪೀದ್ದು ಮಾತ್ರೆ ಅದು ಇದೂ ಅಂತ ಖರ್ಚು ಜಾಸ್ತಿ ಆಗ್ತದೆ' ಅಂದ. ಅವನ ಹೆಂಡತಿ 'ಭಾವಾ ನೀವು ಈಗ ಹಿಂದಿನ ಹಾಗೆ ಗದ್ದೆ ತೋಟದಲ್ಲಿ ದುಡಿಯೂದಿಲ್ಲ ಅಲ್ವಾ? ಇಡೀ ದಿನ ಕೂತ್ಕೊಂಡೇ ಇರ್ತೀರಿ' ಅಂತ ಆಗಾಗ ಕುಚ್ಚಣಿಸ್ಲಿಕ್ಕೆ ಸುರು ಮಾಡಿದ್ಲು.

ಮೊನ್ನೆ ಒಂದು ದಿನ ರಾತ್ರಿ ಊಟ ನಂಗೆ ಅರೆ ಬರೆ ಬಿದ್ದಿತ್ತು. ಸಮಾ ಹೊಟ್ಟೆ ತುಂಬಿರ್ಲಿಲ್ಲ. ಅವಳ ನೆನಪೂ ಕೂಡ ಆಗ್ತಾ ಇತ್ತು. ನಿದ್ದೆ ಬರದೆ ಒದ್ದಾಡ್ತಾ ಇದ್ದೆ. ಉಚ್ಚೆ ಹೊಯ್ಬೇಕು ಅಂತ ಅನಿಸಿತು. ಎದ್ದು ಬಂದೆ. ತಮ್ಮನ ಮಕ್ಕಳು, 'ಅಮ್ಮ ಅಪ್ಪಾ, ನೀವು ಯಾಕೆ ದೊಡ್ಡಪ್ಪನನ್ನು ಹೀನಾಯವಾಗಿ ಕಾಣುದು? ಪಾಪ ಅವರು ನಮಿಗೆ ಅಂತ ಎಷ್ಟು ಕಷ್ಟಪಟ್ಟಿದ್ದಾರೆ. ಅಂಥವರನ್ನು ನೀವು ಹೀಗೆ ಕಾಣುದಾ? ಅವರಿಗಾದ್ರೂ ಯಾರಿದ್ದಾರೆ ನಮ್ಮನ್ನು ಬಿಟ್ರೆ?' ಅಂತ ಕೇಳ್ತಿದ್ದವು. ಅದಕ್ಕೆ ನನ್ನ ತಮ್ಮ 'ಸುಮ್ನೆ ಕೂತ್ಕೊಳ್ಳಿ. ನಿಮಿಗೆ ಇದೆಲ್ಲ ಬೇಡ. ದೊಡ್ಡವರ ವಿಷಯ. ಅವ ಆದಷ್ಟು ಬೇಗ ಇಲ್ಲಿಂದ ಕಳಚಿಕೊಂಡ್ರೆ ಸಾಕು. ಯಾರಿಗೂ ತೊಂದರೆ ಕೊಡದೆ ಹೋದ್ರೆ ಸಾಕು' ಅಂತ ಹೇಳಿದ. ಅದಕ್ಕೆ ಅವನ ಹೆಂಡತಿ ಹೌದೂಂತ, 'ಆ ಮುದುಕ ಹಿಂದಿನ ಹಾಗೆ ದುಡಿಯೂದಿಲ್ಲ. ಬೇಗ ಸತ್ರೆ ಒಳ್ಳೇದು ಅಂತ ಊಟ ತಿಂಡಿಯೆಲ್ಲ ಕಡಿಮೆ ಕಡಿಮೆಯೇ ಕೊಡ್ತಾ ಇದ್ದೇನೆ' ಅಂದ್ಲು. ಇದೆಲ್ಲ ಕೇಳಿ ನಂಗೆ ಹೇಗೆ ಆಯ್ತೂ ಅಂದ್ರೆ ಆಗ್ಲೇ ಬಾವಿಗೆ ಹಾರುವಾ ಅಂತ ಆಯ್ತು. ಅವತ್ತು ರಾತ್ರಿ ಇಡೀ ನಿದ್ರೆ ಬರ್ಲಿಲ್ಲ. ಬೆಳಿಗ್ಗೆ ಎದ್ದವನೇ ಯಾರಿಗೂ ಹೇಳದೆ ಸಿಕ್ಕಿದಷ್ಟು ದುಡ್ಡು, ಒಂದೆರಡು ಜೋಡಿ ಬಟ್ಟೆ ಎಲ್ಲ ಒಂದು ಜೋಳಿಗೆಗೆ ಹಾಕಿಕೊಂಡು ರಸ್ತೆಗೆ ಬಂದೆ. ಒಂದು ವಾಹನವೂ ಸಿಗ್ಲಿಲ್ಲ. ನಡ್ಕೊಂಡೇ ಬಂದೆ. ನಿನ್ನೆ ರಾತ್ರಿ ಒಂದು ದೇವಸ್ಥಾನದ ಜಗುಲಿಯಲ್ಲಿ ಮಲಗಿದ್ದೆ. ಇವತ್ತು ಬೆಳಿಗ್ಗೆ ಎದ್ದು ಇಲ್ಲೀ ತಂಕ ಬಂದೆ. ಇದಿಷ್ಟು ನನ್ನ ಕತೆ' ಅಂತ ಹೇಳಿ ತಲೆ ಅಡಿಗೆ ಹಾಕಿ ಕೂತ.

'ಹೂಂ... ಮುಂದೆ ಏನು? ಎತ್ತ?'

'ಸಾಧುಗಳೇ ನಂಗೆ ಎಂತಸಾ ಗೊತ್ತಿಲ್ಲ. ಒಂದು ಸಲ ಅನ್ನಿಸ್ತದೆ ವಾಪಾಸ್ ಮನೆಗೇ ಹೋಗುವಾ ಅಂತ. ತಮ್ಮ ಎಷ್ಟಾದ್ರೂ ರಕ್ತ ಹಂಚಿಕೊಂಡವ ಅಲ್ವಾ? ನಾನು ಎಲ್ಲಿದ್ದೇನೆ ಅಂತ ಗಾಬರಿಯಾಗಿ ಫೋನ್ ಮಾಡ್ಬಹುದು ಅಂತ ಎಣಿಸ್ತಾ ಇದ್ದೇನೆ. ಒಮ್ಮೆ ಅವ ಫೋನ್ ಮಾಡಿದ್ರೆ ಹೋಗುವಾ ಅಂತ ಮನಸ್ಸು ಹೇಳ್ತದೆ.'

'ಹ ಹ್ಹಾ... ತಮ್ಮಾ ನಿಂಗೆಲ್ಲೋ ಹುಚ್ಚು' ಅಂತ ಹೇಳಿದ ಸಾಧು ಗಹಗಹಿಸಿ ನಕ್ಕ.

'ನೋಡು ತಮ್ಮಾ, ಹೆಚ್ಚೂ ಕಡಿಮೆ ನಮ್ಮದೂ ಕೂಡ ಇದೇ ಕತೆ. ನಿಂಗೆ ಈಗ ಆದ ಅನುಭವ ನಮಗೆ ಯಾವತ್ತೋ ಆಗಿದೆ. ನಾವು ಹೀಗೆಯೇ ಅಲೆದಾಡ್ತಾ ಆಡ್ತಾ ಊರೂರಲ್ಲಿ ಸೇರಿಕೊಂಡವರು. ನಮ್ಮ ಹಿನ್ನೆಲೆ ಎಲ್ಲ ಕೇಳಬಾರದು. ನಾವು ಹೇಳೋದೂ ಇಲ್ಲ. ನಾವು ಈ ಕೊರೊನಾ ಗಿರೋನಾಕ್ಕೆಲ್ಲ ಹೆದರುವವರೂ ಅಲ್ಲ. ಊರೂರು ಅಲೀತೇವೆ. ಯಾರೋ ಪುಣ್ಯಾತ್ಮರು ಭಿಕ್ಷೆ ಹಾಕ್ತಾರೆ. ಸಿಕ್ಕಿದ್ದು ತಿಂತೇವೆ. ತೀರ್ಥಕ್ಷೇತ್ರ ಸುತ್ತುತ್ತೇವೆ. ನೀನೂ ನಮ್ಮ ಜೊತೆ ಸೇರಿಕೊಳ್ತೀಯಾ?'

ದಯಾನಂದನಿಗೆ ಗೊಂದಲ ಆಯ್ತು. ಒಂದಿಷ್ಟು ಹೊತ್ತು ಯೋಚನೆ ಮಾಡಿ ಕಡೆಗೆ, 'ಸಾಧೂ ಮಹಾರಾಜ್, ಈಗ ಹೇಗೂ ಕತ್ತಲೆ ಆಯ್ತು. ನಾನು ಈ ರಾತ್ರಿ ನಿಮ್ಮ ಒಟ್ಟಿಗೆ ಇರ್ತೇನೆ. ನಾಳೆ ಬೆಳಿಗ್ಗೆಯವರೆಗೆ ಯೋಚನೆ ಮಾಡ್ತೇನೆ. ಆಮೇಲೆ ಹೇಳ್ತೇನೆ' ಅಂದ.

ಅವತ್ತು ರಾತ್ರಿ ಅಲ್ಲಿಯೇ ಇದ್ದ ಹೊಳೆಯಲ್ಲಿ ಮಿಂದು ಸಾಧುಗಳು ಬೇಡಿ ತಂದಿದ್ದ ಆಹಾರವನ್ನೇ ತಿಂದ. ಎಷ್ಟೋ ವರ್ಷಗಳ ನಂತ್ರ ಒಟ್ಟಿಗೆ ಊಟ ಮಾಡುವ ಸುಖವನ್ನು ಕಂಡ. ರಾತ್ರಿ ನಿದ್ರೆ ಬಂದರೂ ಆಗಾಗ ಎಚ್ಚರವಾಗಿ ಮೊಬೈಲ್ ನೋಡುದು ನಿಟ್ಟುಸಿರು ಬಿಟ್ಟು ಮಲಗುದು ಮಾಡ್ತಿದ್ದ. ಅದೆಷ್ಟು ಹೊತ್ತಿಗೋ ಒಳ್ಳೆಯ ನಿದ್ರೆ ಬಂತು. ಮರುದಿವಸ ಬೆಳಿಗ್ಗೆ ಎಚ್ಚರವಾದಾಗ ಸಾಧುಗಳು ಸ್ನಾನ ಮಾಡಿ ಹೊರಡಲು ಸಿದ್ಧರಾಗಿದ್ದರು. ಅವ ಗಡಬಡಿಸಿ ಎದ್ದ. 'ಏನಪ್ಪಾ ತಮ್ಮಾ... ಏನು ನಿರ್ಧಾರ ಮಾಡಿದೀ?' ಅಂತ ಸಾಧು ಕೇಳಿದ. ದಯಾನಂದ 'ಸಾಧುಗಳೇ ಇನ್ನು ನಾನು ಕೂಡಾ ನಿಮ್ಮ ಒಟ್ಟಿಗೇ...' ಅಂತ ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದ. ಅದಕ್ಕೆ ಅವ, 'ನೋಡು ತಮ್ಮಾ ಇದೆಲ್ಲ ಬದುಕಿನ ಪಾಠಗಳು. ಅದಕ್ಯಾಕೆ ಕಣ್ಣಲ್ಲಿ ನೀರು ತುಂಬಿಕೊಳ್ತೀ? ನಾವು ಇಲ್ವೇನು? ಬಾ ನಮ್ಮ ಜೊತೆಗೆ. ಆದ್ರೆ ಒಂದು ಷರತ್ತು. ನಮ್ಮಲ್ಲಿ ಏಕವಚನಾನೆ. ಬಹುವಚನ ಇಲ್ಲ. ನೀನು ಇನ್ನು ಮುಂದೆ ದಯಾ ಮಹಾರಾಜ್. ಎಲ್ಲಾನೂ ಸಮಾನವಾಗಿ ಹಂಚಿಕೊಳ್ಬೇಕು. ಕಳೆದುಹೋದದ್ದರ ಬಗ್ಗೆ ಆಗ್ಲೀ ಅಥವಾ ನಮ್ಮ ವೈಯಕ್ತಿಕ ವಿಷಯದ ಬಗ್ಗೆಯಾಗ್ಲೀ ಕೇಳಕೂಡದು. ನಮಿಗೆ ಆ ದೇವ್ರು ಈ ದೇವ್ರು ಅಂತ ಇಲ್ಲ. ಮಂದಿರ ಮಸೀದಿ ದರಗಾ ಚರ್ಚು ಎಲ್ಲಾದ್ರೂ ಸರಿ ನಮಗೆ. ಇದಕ್ಕೆ ಒಪ್ಪಿಗೇನಾ?' ಅಂತ ಕೇಳಿದ. ದಯಾನಂದ ಒಪ್ಪಿಗೆ ಇದೆ ಅಂದ. 'ಸರಿ ಹಾಗಾದ್ರೆ. ಸ್ನಾನ ಮಾಡಿ ಹೊರಡು' ಅಂದ. ದಯಾನಂದ ತಯಾರಾದ. ಸಾಧುಗಳ ಜೊತೆ ಹೊರಟ. ಒಬ್ಬ ಏಕತಾರಿ ಮಿಡಿಯುತ್ತಿದ್ದ. ಉಳಿದವರು ಹಾಡುತ್ತಿದ್ದರು. ದಯಾನಂದನಿಗೆ ಹಾಡಿನೊಂದಿಗೆ ಸೇರಿಕೊಳ್ಳಲು ಆಗುತ್ತಲೇ ಇರಲಿಲ್ಲ. ಆಗಾಗ ಜೋಳಿಗೆಯ ಒಳಗೆ ಕೈ ಹಾಕಿ ಮೊಬೈಲ್ ತೆಗೆದು ನೋಡುದು ಮತ್ತೆ ಇಡುದು ಮಾಡ್ತಿದ್ದ.

'ಏನು ದಯಾ ಮಹಾರಾಜ್, ಏನು ನೋಡ್ತಾ ಇದ್ದೀ?'

'ಏನಿಲ್ಲ ಮಹಾರಾಜ್. ನನ್ನ ತಮ್ಮ ಏನಾದ್ರೂ ನಾನು ಎಲ್ಲಿ ಅಂತ ಗಾಬರಿಯಾಗಿ ಕಾಲ್ ಮಾಡ್ತಾನಾ ಅಂತ ನೋಡ್ತಾ ಇದ್ದೆ.'

'ನೋಡು... ನಿಂಗೆ ಇನ್ನೂ ಮೋಹ ಬಿಟ್ಟಿಲ್ಲ. ಆ ದರಿದ್ರ ಮೊಬೈಲನ್ನು ಬಿಸಾಡು. ಆಗ ಎಲ್ಲದ್ರಿಂದ ಮುಕ್ತಿ ಸಿಕ್ಕಿ ಎಲ್ಲ ನಿರಾಳ ಆಗ್ತದೆ' ಅಂದ.

ದಯಾನಂದ ಜೋಳಿಗೆಯಲ್ಲಿ ಇದ್ದ ಮೊಬೈಲನ್ನು ಪಕ್ಕದಲ್ಲಿಯೇ ಇದ್ದ ತೋಡಿಗೆ ಬಿಸಾಡಿದ. ಕೆಲವು ಹೆಜ್ಜೆ ನಡೆಯುವಾಗ ಎಲ್ಲವನ್ನೂ ಕಳಕೊಂಡ ನಿರಾಳ ಭಾವ ಮೂಡಿತು. ಸಾಧುಗಳೆಲ್ಲ

ಆದದ್ದೆಲ್ಲ ಒಳಿತೇ ಆಯಿತು
ನಮ ಶ್ರೀಧರನ ಸೇವೆಗೆ
ಸಾಧನ ಸಂಪತ್ತಾಯಿತ್ತು

ಅಂತ ಹಾಡ್ತಾ ಇದ್ರೆ ಇವನ ದನಿಯೂ ಅದಕ್ಕೆ ಸೇರಿತು.

ಪ್ರತಿಕ್ರಿಯಿಸಿ: feedback@sudha.co.in